“ಇವತ್ತಿನ ಪೇಪರ್ ನೋಡಿದ್ಯಾ ಅಮನ್?”

ಒಬ್ಬ ಆಟೋದವನು ಪ್ರಶ್ನಿಸಿದ. ಆತನ ಪ್ರಶ್ನೆಯನ್ನು ಕೇಳಿ ಗಾಬರಿಗೊಂಡ ಅಮನ್, ತನ್ನ ಭಾವನೆಯನ್ನು ಮುಚ್ಚಿಟ್ಟುಕೊಳ್ಳುವ ಪ್ರಯತ್ನ ಮಾಡುತ್ತಲೇ ಪ್ರಶ್ನಿಸಿದ: “ಏ... ಏನು... ಏನಾಯ್ತು?”

“ಒಬ್ಬ ವೃದ್ಧ ನಿನ್ನೆ ಆಟೋದಲ್ಲಿ ತನ್ನ ಬ್ಯಾಗನ್ನು ಮರೆತುಹೋಗಿದ್ದನಂತೆ. ಅದರಲ್ಲಿ ತುಂಬಾ ಮಹತ್ವದ ದಾಖಲೆಗಳು ಇದ್ದವಂತೆ. ಅದು ಸಿಕ್ಕವರು ಅದನ್ನು ಕಾಂಕೇಯಲ್ಲಿರುವ ಆತನ ಮನೆಗೆ ತಲುಪಿಸಬೇಕಂತೆ. ಬ್ಯಾಗನ್ನು ತಲುಪಿಸಿದವರಿಗೆ ಬಹುಮಾನ ನೀಡುತ್ತಾರಂತೆ...”

ಆಟೋಗೆ ಸಂಬಂಧಿಸಿದ ವಿಷಯಗಳು ಇದ್ದರೆ ಹಂಚಿಕೊಳ್ಳುವುದು ಅವರ ಪದ್ಧತಿ.

ಅಮನ್‌ಗೆ ಗಾಬರಿ. ರಾತ್ರಿ ಆ ವ್ಯಕ್ತಿ ಆಟೋದಿಂದ ಇಳಿದಾಗ ಮಧ್ಯರಾತ್ರಿ ದಾಟಿತ್ತು. ಇಷ್ಟು ಬೇಗ ಪತ್ರಿಕೆಯಲ್ಲಿ ಹೇಗೆ ಪ್ರಕಟವಾಯಿತು! ಬಹುಶಃ ಆತ ನೇರವಾಗಿ ಪತ್ರಿಕೆಯವರಿಗೆ ಜಾಹೀರಾತು ನೀಡಿದನೇ? ಅದಕ್ಕೂ ಪೊಲೀಸ್ ದೂರಿನ ಪ್ರತಿ ಬೇಕಲ್ಲವೇ? ಏನೂ ಅರ್ಥವಾಗುತ್ತಿಲ್ಲ. ಆದರೆ, ಪತ್ರಿಕೆಯಲ್ಲಿ ಪ್ರಕಟವಾಗಿರುವುದಂತೂ ಸತ್ಯ; ಏಕೆಂದರೆ, ಪತ್ರಿಕೆ ಸ್ನೇಹಿತನ ಕೈಯಲ್ಲೇ ಇತ್ತು.

ಅಮನ್ ಆತನನ್ನು ಪ್ರಶ್ನಿಸಿದ, “ಪೊಲೀಸ್ ಕಂಪ್ಲೇಂಟ್ ಕೊಟ್ಟಿಲ್ಲವೇ ಆತ? ಕೊಟ್ಟಿದ್ದರೆ ಪೊಲೀಸಿನವರು ನಮ್ಮೆಲ್ಲರನ್ನೂ ಪ್ರಶ್ನಿಸಬೇಕಿತ್ತಲ್ಲ...”

“ಕಂಪ್ಲೇಂಟ್ ಕೊಟ್ಟಿದ್ದಾನಂತೆ. ಆದರೆ ಆ ವ್ಯಕ್ತಿಗೆ ಆಟೊ ನಂಬರ್ ಅಥವಾ ಆಟೊದವನ ಮುಖಚಹರೆ ನೆನಪಿಲ್ಲವಂತೆ; ಆತ ಗಮನಿಸಿಲ್ಲವಂತೆ...”

ಆತ ಹಾಗೆ ಹೇಳಿದಾಗ ಅಮನ್‌ಗೆ ಒಳಗೊಳಗೇ ಸಂತೋಷ. ಆದರೆ ಅದನ್ನು ಆತ ವ್ಯಕ್ತಪಡಿಸಲಿಲ್ಲ. ನಂತರ ವಿಷಯಾಂತರವಾಯಿತು. ಎಲ್ಲರೂ ಅಲ್ಲಿಂದ ನಿರ್ಗಮಿಸಿದರು. ‘ನನ್ನ ಕನಸುಗಳು ಸಾಕಾರಗೊಳ್ಳುವ ಸಮಯ ಸನ್ನಿಹಿತವಾಗಿದೆ. ಖಂಡಿತವಾಗಿಯೂ ಅವು ಅಕ್ರಮ ಸಂಪಾದನೆಯ ನೋಟುಗಳು. ಹಾಗಾಗಿಯೇ ಆ ವ್ಯಕ್ತಿ ಬ್ಯಾಗ್‌ನಲ್ಲಿ ಹಣವಿದ್ದ ಸಂಗತಿಯನ್ನು ಪೊಲೀಸರಿಗೆ ತಿಳಿಸಿಲ್ಲ. ಆಟೊ ನಂಬರ್ ಹಾಗೂ ನನ್ನ ಮುಖ ಚಹರೆಯೂ ಆತನಿಗೆ ತಿಳಿದಿಲ್ಲ. ಅಂದರೆ, ಇನ್ನು ಆ ಎಲ್ಲ ಹಣಕ್ಕೆ ನಾನೇ ವಾರಸುದಾರ. ನಾನೀಗ ಕೋಟ್ಯಧಿಪತಿ. ನನ್ನ ಮಗನಿಗೆ ಅತ್ಯುತ್ತಮ ಗುಣಮಟ್ಟದ ಚಿಕಿತ್ಸೆಯನ್ನು ನೀಡಿ ಉಳಿಸಿಕೊಳ್ಳುತ್ತೇನೆ; ನನ್ನದೇ ಆಟೊ ಖರೀದಿಸುತ್ತೇನೆ; ನಿಧಾನವಾಗಿ ಸ್ವಂತ ಮನೆಯನ್ನೂ ಕಟ್ಟಿಕೊಳ್ಳುತ್ತೇನೆ. ಒಂದೇ ಬಾರಿಗೆ ಎಲ್ಲವನ್ನೂ ಮಾಡಿದರೆ, ಜನರಿಗೆ ಅನುಮಾನ ಬಂದುಬಿಡುತ್ತದೆ...’

ಒಂದು ಕಿಲೋ ಸೇಬುಹಣ್ಣನ್ನು ಖರೀದಿಸಿ, ಸಂಜೆಯ ಸಮಯಕ್ಕೆ ಆತ ಆಸ್ಪತ್ರೆಯನ್ನು ತಲುಪಿದ. ಹೆಂಡತಿಯೊಂದಿಗೆ ಮಾತನಾಡಿಕೊಂಡು, ಆತ ನೇರವಾಗಿ ವೈದ್ಯರ ಬಳಿಗೆ ಹೋದ. ಎಷ್ಟೇ ಖರ್ಚಾದರೂ ಪರವಾಗಿಲ್ಲ; ಮಗನಿಗೆ ಉತ್ತಮ ಚಿಕಿತ್ಸೆ ಕೊಡಿಸುವ ಬಗ್ಗೆ ಆತನಲ್ಲಿ ವಿಶ್ವಾಸ ಮನೆಮಾಡಿತ್ತು. ವೈದ್ಯರನ್ನು ಭೇಟಿ ಮಾಡಿ ಆತ ಮುಂದಿನ ಕ್ರಮಗಳ ಬಗ್ಗೆ ವಿಚಾರಿಸಿದ.

“ಡಾಕ್ಟರ್, ಮಗನಿಗೆ ಹೇಗಿದೆ?”

ಒಂದು ನಿಮಿಷ ತಡೆದು ಡಾಕ್ಟರ್ ನಿಧಾನವಾಗಿ ಉತ್ತರಿಸಿದರು, “ಮುಂಬೈನಿಂದ ದೊಡ್ಡ ಡಾಕ್ಟರ್ ಬಂದಿದ್ದಾರೆ. ಅವರು ನಿಮ್ಮ ಮಗನನ್ನು ಚೆಕ್ ಮಾಡಿದ್ದಾರೆ. ‘ಗಂಭೀರ ಲಕ್ಷಣದ ಕಾಯಿಲೆ; ಗುಣಪಡಿಸುವುದು ಕಷ್ಟ; ಈಗ ಔಷಧಿಗಿಂತಲೂ ಶುಭಹಾರೈಕೆ, ಆಶೀರ್ವಾದಗಳೇ ಹೆಚ್ಚು ಕೆಲಸಮಾಡಬೇಕು’ ಎಂದಿದ್ದಾರೆ. ಅಂದರೆ, ಇಲ್ಲಿ ಔಷಧಿಗಿಂತಲೂ ಅದೃಷ್ಟವೇ ನಿಮ್ಮ ಮಗನನ್ನು ಉಳಿಸಬೇಕು.”

“ಮಗನಿಗೆ ಅಂಟಿಕೊಂಡಿರುವುದು ಯಾವ ರೋಗ?”